ತಪ್ಪಿದರೆ ಪೆನಾಲ್ಟಿ ಇದೆ. ಆರ್ಡರ್ ಪೂರೈಸಿದ 15 ದಿನದ ಒಳಗೆ ಪೇಮೆಂಟ್. ಈಗ 10ಲಕ್ಷದ ಅಡ್ವಾನ್ಸ್ ಕೊಡುವೆ, ಒಪ್ಪಿಗೆಯಾದರೆ ಸೈನ್ ಮಾಡಿ' ಎಂದರು. ಪ್ರಭುವಿನ ಮುಖದಲ್ಲಿ ಖುಷಿ ಎದ್ದು ಕಾಣುತ್ತಿತ್ತು. ಆರ್ಡರಿಗೆ ಸೈನ್ ಮಾಡಿ ಒಂದು ಕಾಪಿಯನ್ನು ಅವರಿಗೆ ವಾಪಸ್ಸು ಕೊಡಲು ಹೊರಟ. ರೆಡ್ಡಿಯೆಂದರು: 'ವಿದ್ಯಮ್ಮ ನೀವೂ ಸೈನ್ ಮಾಡಿ, ನಿಮ್ಮನ್ನು ನೋಡಿ ಈ ಆರ್ಡರ್ ಕೊಡುತ್ತಿರುವುದು, ಪ್ರತೀ ತಿಂಗಳು ಮೀಟಿಂಗ್ ನಡೆಯಬೇಕು, ಅದರಲ್ಲಿ ನೀವಿರಬೇಕು' ಎಂದರು.

ಪ್ರಭು ಕೂಡಲೆ, 'ನೋಡಿ ಈ ಪ್ರಾಪರ್ಟಿ ನನ್ನ ಹೆಸರಿಗಿದೆ. ನನ್ನ ಸಿಗ್ನೇಚರ್ ಸಾಕು, ನಿಮ್ಮ ಆರ್ಡರ್ ಪೂರೈಸಿದರೆ ಸರಿಯಲ್ವಾ?" ಎಂದ. ರೆಡ್ಡಿಯವರೆಂದರು: 'ಪ್ರಾಪರ್ಟಿ ಯಾರ ಹೆಸರಿಗಿದ್ದರೇನು? ಮೂರು ತಿಂಗಳ ಕೆಳಗೆ ನೀವು ಸಮಯಕ್ಕೆ ಸರಿಯಾಗಿ ಆರ್ಡರ್ ಪೂರೈಸದೆ ಲಾಸ್ ಆಯಿತು, ಇಲ್ಲಿನ ಪರಿಸ್ಥಿತಿ ಗೊತ್ತು ನನಗೆ, ಅದಕ್ಕಾಗಿ ವಿದ್ಯಮ್ಮ ಇರಬೇಕೆನ್ನುವುದು'. ಪ್ರಭು ಒಲ್ಲದ ಮನಸ್ಸಿನಿಂದಲೇ ಡಾಕ್ಯುಮೆಂಟನ್ನು ನನ್ನ ಮುಂದೆ ತಳ್ಳಿದ. ಯಾಕಾಗಿ ನಾನಿಲ್ಲಿ ಸೈನ್ ಹಾಕಬೇಕು? ನನಗೂ ಈ ಫ್ಯಾಕ್ಟರಿಗೂ ಇರುವ ಸಂಬಂಧವಾದರೂ ಏನು? ಎಲ್ಲವನ್ನೂ ತೊರೆಯಬೇಕೆಂದುಕೊಂಡಿದ್ದೆ, ಮನಸ್ಸು ಹೊಯ್ದಾಡಿತು. ಕೊನೆಗೆ ಏನಾದರಾಗಲಿ. ನಾನು ಮದುವೆಯಾಗಿ ಬಂದ ಮನೆ, ಒಳ್ಳೆಯದಾಗಲಿ ಎಂದುಕೊಂಡು ಸೈನ್ ಮಾಡಿದೆ.

ಮನೆಗೆ ಬರುವಾಗ ಕಾರಿನಲ್ಲಿ ಪ್ರಭು ಸೂಕ್ಷ್ಮವಾಗಿ ಪರಿಸ್ಥಿತಿ ವಿವರಿಸಿದ: ಸಂಜೆ ಚಹಾದ ಕಪ್ಪನ್ನು ಮುಂದಿಡುತ್ತಾ, 'ವಿದ್ಯಾ ಎರಡು ಕೋಟಿಯ ಆರ್ಡರ್ ಎಂದರೆ ಸಣ್ಣದಲ್ಲ ಅಲ್ವಾ? ಹೆಚ್ಚು ಜನರನ್ನು ಅಪಾಯಿಂಟ್ ಮಾಡಬೇಕು, ಈಗ ನಂಬಿಕೆಯ ಕೆಲಸದವರು ಸಿಗೋದಿಲ್ಲ, ತುಂಬಾ ಕೆಲಸವಿದೆ. ಹಾಂ... ನೀನ್ಯಾವಾಗ ಊರಿಗೆ ಹೊರಡುತ್ತಿ? ಬಸ್ ಸ್ಟಾಂಡಿಗೆ ನಾನೇ ಬಿಟ್ಟು ಬರುತ್ತೇನೆ. ನಿನಗಾಗಿ ಅಷ್ಟು ಮಾಡೋಕಾಗಲ್ವ? ಆಗಾಗ ಬರುತ್ತಿರು ಮಾರಾಯ್ತಿ' ಎಂದ ನಸುನಗುತ್ತಾ.

ನನ್ನ ಸ್ಥಾನ ಈ ಮನೆಯಲ್ಲಿ ನಿಚ್ಚಳವಾಯಿತು. ಪ್ರಭುವಿಗೆ ಜ್ಯೋತಿಷಿಯ ಗ್ರಹಣವಿನ್ನೂ ಬಿಟ್ಟಿಲ್ಲ. ಅಲ್ಲದೆ ಪ್ರಭುವಿನ ಅಹಂಗೆ ನಾನು ಅಡ್ಡಿ. ಅದಕ್ಕಾಗಿ ನನ್ನನ್ನು ಬೇಕಾದಾಗ ಮಾತ್ರ ಉಪಯೋಗಿಸುತ್ತಿದ್ದಾನೆ. ಸಿಟ್ಟು ಒಮ್ಮೆಗೆ ನುಗ್ಗಿ ಬಂತು. ಈಗ ನಾನು ಸುಮ್ಮನಿದ್ದರೆ ಎಲ್ಲವೂ ನಾಶವಾಗುವುದು ಖಂಡಿತ ಎನಿಸಿತು.

'ಪ್ರಭು... ಇಬ್ಬರೂ ಸೇರಿ ಫ್ಯಾಕ್ಟರಿ ನೋಡಿಕೊಳ್ಳಬಹುದಿತ್ತು ಅಲ್ವಾ? ನಮ್ಮಿಬ್ಬರ ಮಧ್ಯೆ ನನ್ನ ಬೆಕ್ಕಿನ ಕಣ್ಣು ಅಡ್ಡಿ ಅಲ್ವಾ?' ಅದಕ್ಕೆ ಪ್ರಭು ಎತ್ತಲೋ ನೋಡುತ್ತಾ ಹೌದೆನ್ನುವಂತೆ ತಲೆಯಲ್ಲಾಡಿಸಿದ. ಇವನನ್ನು ಸರಿಪಡಿಸಲಾಗದು ಎನಿಸಿತು. ಸಾವರಿಸಿಕೊಂಡು 'ಒಂದು ಕೆಲಸ ಮಾಡಬಹುದು, ನೀನ್ಯಾಕೆ ಊರಿಗೆ ಹೋಗಬಾರದು? ಈ ಬೆಕ್ಕಿನ ಕಣ್ಣಿನಿಂದ ದೂರ. ನಾನು ಇಲ್ಲಿದ್ದು ರೆಡ್ಡಿಯವರ ಆರ್ಡರ್ ಪೂರೈಸುವೆ. ಇಲ್ಲದಿದ್ದರೆ ಪೆನಾಲ್ಟೀ ಆಗುತ್ತೆ ಮಾರಾಯ. ಬ್ಯಾಂಕು ಲೋನ್ ಬೇರೆ ಇದೆ' ಎಂದೆ.

'ಕಳೆದ ವಾರ ರಾ ಮೇಟಿರಿಯಲ್ ಸಪ್ಲಾಯರಿಗೆ ಕೊಟ್ಟ ಚೆಕ್ ಬೇರೆ ಬೌನ್ಸ್ ಆಯ್ತು ಎಂದೆ ಅಲ್ವಾ? ಹೀಗಾದರೆ ಜೈಲಾಗಬಹುದು' ನನ್ನ ಮಾತು ಅವನಿಗೆ ಪಥ್ಯವಾಗಲಿಲ್ಲ. ಒಂದು ಕಡೆ ರೆಡ್ಡಿಯವರ ಎರಡು ಕೋಟಿಯ ಆರ್ಡರ್ ಮತ್ತೊಂದು ಕಡೆ ಚೆಕ್ ಬೌನ್ಸ್ ಆಗಿ ಜೈಲು ಶಿಕ್ಷೆ ಸಿಗುವ ಭಯ. ಆರ್ಡರ್ ಪೂರೈಸಲಾಗದಿದ್ದರೆ ಸಿಗುವ ಪೆನಾಲ್ಟೀ ಬೇರೆ. ಅಲ್ಲದೆ ಕೆಲಸದವರಿಗೆ ಸಂಬಳವನ್ನು ಎರಡು ತಿಂಗಳಿಂದ ಕೊಡದಿರುವುದು ಎಲ್ಲವೂ ನೆನಪಾಯಿತೆಂದು ಅವನ ಮುಖದಲ್ಲಿ ಮೂಡಿದ ಗೆರೆಗಳೇ ಸಾರಿದವು. ಸ್ವಲ್ಪ ಹೊತ್ತು ಬಿಟ್ಟು ನಿಧಾನವಾಗಿ 'ಜ್ಯೋತಿಷಿಯನ್ನು ಕೇಳ್ತೀನಿ ತಡಿ' ಎಂದ. 'ಅದೆಲ್ಲಾ ಆಗೋಲ್ಲ, ನೀನೇ ಡಿಸಿಶನ್ ತಗೋ, ಇಲ್ಲಾಂದ್ರೆ ನಾನೀಗಲೇ ಊರಿಗೆ ಹೊರಟೆ' ಮತ್ತೇನು ಮಾಡಲಾಗದೆ ನಿಧಾನವಾಗಿ ಎಂದ: 'ಬೇರೇನೂ ಉಪಾಯ ಇಲ್ಲ ಅಲ್ವಾ? ನೀನು ಇಲ್ಲಿದ್ದು ರೆಡ್ಡಿಯವರ ಆರ್ಡರ್ ಪೂರೈಸು, ನಾನೇ ಊರಿಗೆ ಹೋಗ್ತೀನಿ, ಪರಿಸ್ಥಿತಿ ಸುಧಾರಿಸಿದ ನಂತರ ಬರ್ತೀನಿ. ಹಾಂ... ಆಗಾಗ ಫೋನ್ ಮಾಡಿ ವಿಷಯ ತಿಳಿಸುತ್ತಿರು'.

ಫ್ಯಾಕ್ಟರಿಯನ್ನು ನೋಡಿಕೊಳ್ಳಬೇಕು ಅದರೊಂದಿಗೆ ಪ್ರಭುವಿಗೆ ಹಿಡಿದ ಜ್ಯೋತಿಷಿಯ ಗ್ರಹಣವನ್ನೂ ಬಿಡಿಸಬೇಕು, ಆಗಲೇ ಪರಿಸ್ಥಿತಿ ಸುಧಾರಿಸುತ್ತೆ ಎಂದುಕೊಳ್ಳುತ್ತಲೇ ಪ್ರಭುವನ್ನು ಬಸ್ ಹತ್ತಿಸಿ ಬಂದೆ.

●